ಫ್ಯಾಕ್ಸ್: 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ", ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು - 560 099.

URL : www.anekal-pa.in

## ಪರಿಷ್ಕೃತ ಪ್ರಾರಂಭಿಕ ಪ್ರಮಾಣ ಪತ್ರ

(ನಮೂನೆ-3)

ದಿನಾಂಕ: 09/01/2013

ಸಂಖ್ಯೆ: ಆಯೋಪ್ರಾ/ಸಿಸಿ/22/2008-09

**ವಿಷಯ:** ಬೆಂಗಳೂರುನಗರಜಿಲ್ಲೆ, ಆನೇಕಲ್‌ತಾಲ್ಲೂಕು, ಅತ್ತಿಬೆಲೆಹೋಬಳಿ, ಎಂ.ಮೇಡಹಳ್ಳಿ ಗ್ರಾಮದ ಸ.ನಂ.39/1, 39/2, 40/3 ಮತ್ತು 42/1ರಲ್ಲಿನ ಒಟ್ಟು 11ಎಕರೆ 18ಗುಂಟೆ ಪ್ರದೇಶಕ್ಕೆ ಪರಿಷ್ಕೃತ ವಸತಿ ಅಭಿವೃದ್ಧಿ ನಕ್ಷೆ ಅನುಮೋದನೆ ಸಂಬಂಧ.

ಉಲ್ಲೇಖ: 1) ನಿಮ್ಮ ಅರ್ಜಿ ಸಂಖ್ಯೆ:2018 ದಿನಾಂಕ:19.10.2012.

2) ಪ್ರಾಧಿಕಾರದ 38ನೇ ಸಭೆಯ ವಿಷಯಸಂಖ್ಯೆ:05 ದಿನಾಂಕ:30.11.2012ರ ತೀರ್ಮಾನ.

3) ಆನೇಕಲ್ ಯೋಜನಾ ಪ್ರಾಧಿಕಾರಕ್ಕೆ ಹಣ ಪಾವತಿಸಿದ ಬಗ್ಗೆ
ದಿನಾಂಕ: 9.02.2010 ಡಿ.ಡಿ.ನಂ. 017093 ರೂ. 21,60,000/-
ದಿನಾಂಕ: 18.03.2008 ಡಿ.ಡಿ.ನಂ.074783 ರೂ. 4,15,000/-
ದಿನಾಂಕ: 3.07.2008 ಡಿ.ಡಿ.ನಂ. 170089 ರೂ. 4,40,000/-
ದಿನಾಂಕ:29.09.2009 ಡಿ.ಡಿ.ನಂ.653061 ರೂ. 10,000/-
ದಿನಾಂಕ:17.12.2012 ಡಿ.ಡಿ.ನಂ. 022356 ರೂ. 10,000/-
ಹಾಗೂ ಕೆರೆಗಳಲ್ಲಿ ನೀರು ಸಂರಕ್ಷಣೆ ಸಂಬಂಧ ಡಿ.ಡಿ. ನಂ.022357 ರೂ. 11,45,000/-

4) ಅರ್ಜಿದಾರರ ಪರಿತ್ಯಜನ ಪತ್ರದ ದಿನಾಂಕ: 5.01.2013.

******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿನ ನಿಮ್ಮ ಪರಿಷ್ಕೃತ ವಸತಿ ಸಮುಚ್ಚಯ ನಕ್ಷೆಯಲ್ಲಿ ಬದಲಾವಣೆಗಳನ್ನು ಕೋರಿರುವ ಪ್ರಸ್ತಾವನೆಯನ್ನು ಉಲ್ಲೇಖ(2)ರ ಆನೇಕಲ್ ಯೋಜನಾ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಹಾಗೂ ಈಗಾಗಲೇ ಸದರಿ ಪ್ರಕರಣದಲ್ಲಿ ಉಲ್ಲೇಖ(3)ರಂತೆ ಸಂಬಂಧಿತ ಶುಲ್ಕವನ್ನು ಆನೇಕಲ್ ಯೋಜನಾ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಹಾಗಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ ಪ್ರಕರಣ 17ರಡಿಯಲ್ಲಿ ಮೆ.ಜನಾಧರ್(ಇಂಡಿಯಾ) ಪ್ರೈವೇಟ್ ಲಿಮಿಟೆಡ್, ಇವರಿಗೆ ಬೆಂಗಳೂರು ನಗರಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಎಂ.ಮೇಡಹಳ್ಳಿ ಗ್ರಾಮದ ಸ.ನಂ. 39/1, 39/2, 40/3 ಮತ್ತು 42/1ರಲ್ಲಿನ ಒಟ್ಟು 11ಎಕರೆ 18ಗುಂಟೆ ಜಮೀನಿನಲ್ಲಿ ವಸತಿ ಸಮುಚ್ಚಯ ನಕ್ಷೆಗೆ(Group Housing) ಸಂಬಂಧಿಸಿದಂತೆ ಅನುಮತಿ ನೀಡಿ ಈ ಕೆಳಗಿನ ನಿಬಂಧನೆಗಳೊಡನೆ ನಕ್ಷೆಯನ್ನು ಅನುಮೋದಿಸಲಾಗಿದೆ.

ಮು.ತಿ.ನೋ.

1) ಮೇಲ್ಕಂಡ ವಸತಿ ಸಮುಚ್ಛಯ ನಕ್ಷೆಯಲ್ಲಿನ ಬ್ಲಾಕ್‌ಗಳಲ್ಲಿ ಕಟ್ಟಡ ಕಟ್ಟುವ ಮುನ್ನ ನಕ್ಷೆಯನ್ನು ಈ ಕಛೇರಿಯಿಂದ ನಿಯಮಗಳ ಪ್ರಕಾರ ಅನುಮೋದನೆ ಪಡೆದು ನಂತರ ಮಾಯಸಂದ್ರ ಗ್ರಾಮಪಂಚಾಯ್ತಿಯಿಂದ ಕಟ್ಟಡ ಪರವಾನಿಗೆ ಪಡೆದು ನಂತರ ಕಟ್ಟಡದ ಕೆಲಸವನ್ನು ಪ್ರಾರಂಭಿಸುವುದು.

2) ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರವನ್ನು ನಿಯೋಜಿಸಿಕೊಳ್ಳತಕ್ಕದಲ್ಲ.

3) ಈಗ ನೀಡಿರುವ ವಸತಿ ಸಮುಚ್ಛಯ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಕಟ್ಟಡ ಕಟ್ಟಲು ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯುವುದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಕಟ್ಟಡ ಕಟ್ಟಲು ಸಾಧ್ಯವಾಗದಿದ್ದಲ್ಲಿ ಅನುಮತಿಯನ್ನು ಕಾಲಮಿತಿಯೊಳಗೆ ಸೂಕ್ತ ಕಾರಣಗಳನ್ನು ಸಲ್ಲಿಸಿ ನವೀಕರಿಸಿಕೊಳ್ಳತಕ್ಕದ್ದು.

4) ವಸತಿ ಸಮುಚ್ಛಯ ನಕ್ಷೆಪ್ರದೇಶವನ್ನು ಈ ಪ್ರಾಧಿಕಾರದ ಅನುಮೋದನೆ ನೀಡಿದ 24 ತಿಂಗಳ ಒಳಗಾಗಿ ಸಂಪೂರ್ಣವಾಗಿ ಅಂದರೆ ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು,ಒಳಚರಂಡಿ ವ್ಯವಸ್ಥೆ,ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ ಅಭಿವೃದ್ಧಿ ಪಡಿಸತಕ್ಕದ್ದು,

5) ಪ್ರಸ್ತಾವಿತ ಕಟ್ಟಡದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇರ್ಜ್ ಟ್ರೀಟ್‌ಮೆಂಟ್ ಪ್ಲಾಂಟ್‌ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳಿಗೆ ಒಳಪಟ್ಟಿರಬೇಕು ಹಾಗೂ ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪ್ರಾಧಿಕಾರದಿಂದ ಪಡೆಯುವ ಮುನ್ನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಂದ ಅವಶ್ಯವಾಗಿ ನಿರಾಕ್ಷೇಪಣಾ ಪತ್ರ ಪಡೆಯತಕ್ಕದ್ದು.

6) ವಸತಿ ಸಮುಚ್ಛಯ ನಕ್ಷೆ ಕಾರ್ಯಗತಗೊಳಿಸುವ ಮೊದಲು ಕರ್ನಾಟಕ ಗ್ರಾಮ ಪಂಚಾಯಿತಿ ಕಾಯ್ದೆಯಡಿ ಮಾಯಸಂದ್ರ ಗ್ರಾಮಪಂಚಾಯ್ತಿಯಿಂದ ಪರವಾನಗಿ ಪಡೆಯತಕ್ಕದ್ದು.

7) ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೇ ವಸತಿ ಅಭಿವೃದ್ಧಿ ನಕ್ಷೆಗೆ ಯಾವುದೇ ಬದಲಾವಣೆಯನ್ನು ಮಾಡಬಾರದು.

8) ನಿವೇಶನದ ಆವರಣದೊಳಗೆ ಮಳೆಯ ನೀರನ್ನು ಸಂರಕ್ಷಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

9) ಅನುಮೋದಿತ ವಸತಿ ಅಭಿವೃದ್ಧಿ ನಕ್ಷೆಯಲ್ಲಿನ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು, ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿರುವ ಪ್ರದೇಶಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸುವುದು.

10) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯೂ ಕೂಡಲೇ ರದ್ದಾಗುವುದು.

11) ವಸತಿ ಸಮುಚ್ಛಯ ನಕ್ಷೆಯಲ್ಲಿ ರಸ್ತೆಗಳಿಂದ ಅಕ್ಕ ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

12) ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.

ಪು.ತಿ.ನೋ.

13) ಈ ನಿವೇಶನದ ಬಗ್ಗೆ ಏನಾದರೂ ಸಿವಿಲ್ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ನೀವು ಬದ್ಧರಾಗಿರತಕ್ಕದ್ದು.

14) ವಸತಿ ಸಮುಚ್ಛಯ ನಕ್ಷೆ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಸಮೂಹ ವಸತಿ ನಕ್ಷೆಗೆ ನೀಡಿರುವ ಅಂಗೀಕಾರ ತಂತಾನೆ ರದ್ದುಗೊಳ್ಳುತ್ತದೆ.

15) ಈ ವಸತಿ ಸಮುಚ್ಛಯ ನಕ್ಷೆಯಲ್ಲಿ ಬರುವ ಕಟ್ಟಡಗಳ ಮಾರಾಟ ಸಂಬಂಧ ನೀಡುವ ವಿಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

16) ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (paved foot path) ನಿರ್ಮಿಸುವುದು.

17) ಅನುಮೋದಿತ ವಸತಿ ಅಭಿವೃದ್ಧಿ ನಕ್ಷೆಗೆ ಮಳೆ ನೀರು ಕೊಯ್ಲು ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ ಜಲ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

18) ಪ್ರಸ್ತಾಪಿತ ಪ್ರದೇಶದಲ್ಲಿ ಸೂಕ್ತವಾದ ಕಡೆ ಘನತ್ಯಾಜ್ಯ ನಿರ್ವಹಣೆಗಾಗಿ ಜಾಗವನ್ನು ಕಾಯ್ದಿರಿಸತಕ್ಕದ್ದು.

19) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಎಲ್ಲಾ ಷರತ್ತುಗಳನ್ನು ಪಾಲಿಸತಕ್ಕದ್ದು.

20) ವಸತಿ ಸಮುಚ್ಛಯ ಯೋಜನಾ ಪ್ರದೇಶದಲ್ಲಿ ರಸ್ತೆಗಳ ಬದಿಯಲ್ಲಿ ಗಿಡಮರಗಳನ್ನು ನೆಡತಕ್ಕದ್ದು.

21) ಈ ಹಿಂದೆ ಪ್ರಾಧಿಕಾರದಿಂದ ಪತ್ರ ಸಂಖ್ಯೆ: ಆಯೋಪ್ರಾ/ಸಿಸಿ/22/2008-09 ದಿನಾಂಕ: 2.03.2010ರಲ್ಲಿ ಅನುಮೋದಿಸಿದ ಪರಿಷ್ಕೃತ ಸಮೂಹ ವಸತಿ ನಕ್ಷೆಯನ್ನು ರದ್ದುಪಡಿಸಲಾಗಿದೆ.

22) ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ವಿಧಿ 15(4)ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅಧಿಕಾರ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

23) ಇತರೆ ಸಾಮಾನ್ಯ ಷರತ್ತುಗಳು.

09/01

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ
ನಿರ್ದೇಶಕರು ಹಾಗೂ ಸದಸ್ಯ- ಕಾರ್ಯದರ್ಶಿ,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಇವರಿಗೆ,

**ಮೆ.ಜನಾಧರ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್,**
ರಾಜಶ್ರೀ ಪ್ಲಾಜ್ಲ, 34/1, ಶಾಂತಿನಗರ, ಬೆಂಗಳೂರು-560 027.

ದೂರವಾಣಿ : 080-27835122
ಫ್ಯಾಕ್ಸ್ : 080-27836569

# ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ", ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು - 560 099.
URL : www.anekal-pa.in

## ಪರಿಷ್ಕೃತ ಪ್ರಾರಂಭಿಕ ಪ್ರಮಾಣ ಪತ್ರ

ಸಂಖ್ಯೆ: ಆಯೋಪ್ರಾ/ಸಿಸಿ/22/2008-09 ದಿನಾಂಕ: 5/08/13

**ಮೆ.ಜನಾಧರ್(ಇಂಡಿಯಾ)ಪ್ರೈವೇಟ್ ಲಿಮಿಟೆಡ್,** ಇವರು ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಎಂ.ಮೇಡಹಳ್ಳಿ ಗ್ರಾಮದ ಸ.ನಂ.39/1, 39/2, 40/3 ಮತ್ತು 42/1ರಲ್ಲಿನ ಒಟ್ಟು 11ಎಕರೆ 18ಗುಂಟೆ ಪ್ರದೇಶದ ಖಾತೆಸಂಖ್ಯೆ:75/76/77/78/79/80ರಲ್ಲಿ ಪ್ರಾಧಿಕಾರದ ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ:ಆಯೋಪ್ರಾ/ಸಿಸಿ/22/2008-09 ದಿನಾಂಕ: 2.03.2010ರಂದು 880 ಘಟಕಗಳಿಗೆ ವಸತಿ ಸಮುಚ್ಛಯ ನಕ್ಷೆ ಅನುಮೋದನೆ ನೀಡಲಾಗಿದೆ. ಅರ್ಜಿದಾರರ ಕೋರಿಕೆಯ ಮೇರೆಗೆ ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ:ಆಯೋಪ್ರಾ/ಸಿಸಿ/22/2008-09 ದಿನಾಂಕ: 9.01.2013ರನ್ವಯ 1128 ಘಟಕಗಳಿಗೆ ಮಾರ್ಪಾಡು ವಸತಿ ಸಮುಚ್ಛಯ ನಕ್ಷೆಗೆ ಅನುಮೋದನೆ ನೀಡಲಾಗಿದೆ. ಅದರಂತೆ, ಪ್ರಸ್ತುತ ಈ ಹಿಂದೆ 880 ಘಟಕಗಳಿಗೆ ನೀಡಲಾಗಿದ್ದ ಪ್ರಾರಂಭಿಕ ಪ್ರಮಾಣ ಪತ್ರವನ್ನು ರದ್ದುಪಡಿಸಿ ಪರಿಷ್ಕೃತ ವಸತಿ ಸಮುಚ್ಛಯ ನಕ್ಷೆಯಂತೆ, 1128 ಘಟಕಗಳ ನಿರ್ಮಾಣ ಸಂಬಂಧ A1 -A25 ಮತ್ತು Block-B1 to B10ನಲ್ಲಿ ಬೇಸ್‌ಮೆಂಟ್+ನೆಲ+8 ಮೇಲ್ ಮಹಡಿಯಲ್ಲಿ ಒಟ್ಟು 1128 ಘಟಕಗಳ ವಸತಿ ಕಟ್ಟಡ ನಿರ್ಮಾಣಕ್ಕೆ ಪರಿಷ್ಕೃತ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಅನುಮೋದನಾ ಶುಲ್ಕ ರೂ.1,36,000/-ಡಿ.ಡಿ.ನಂ.007912 ಹಾಗೂ ಭದ್ರತಾ ಠೇವಣಿ ಶುಲ್ಕ ರೂ.13,65,142/-ಡಿಡಿ ನಂ.007923 ದಿನಾಂಕ:17.05.2013ರಂದು ಪಾವತಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(1)ರನ್ವಯ ಈ ಕೆಳಕಂಡ ಷರತ್ತುಗೊಳಪಡಿಸಿ ಪರಿಷ್ಕೃತ ಪ್ರಾರಂಭಿಕ ಪ್ರಮಾಣ ಪತ್ರ ನೀಡಿದೆ.

### ಷರತ್ತುಗಳು

1) ಮೇಲ್ಕಂಡ ನಿವೇಶನದಲ್ಲಿ ಕಟ್ಟುವ ಕಟ್ಟಡವನ್ನು ಈ ಕಛೇರಿಯಿಂದ ಅನುಮತಿ ನೀಡಿರುವಂತೆ ವಸತಿ ಉಪಯೋಗಕ್ಕೆ ಮಾತ್ರ ಉಪಯೋಗಿಸತಕ್ಕದ್ದು, ಮತ್ತು ಕಟ್ಟಡವನ್ನು ಅನುಮೋದಿತ ನಕ್ಷೆಯಂತೆ ಕಟ್ಟಡ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಸೆಕ್ಷನ್ 15(1)ರಡಿ ನೀಡಲಾಗಿರುವ ಪ್ರಾರಂಭಿಕ ಪ್ರಮಾಣ ಪತ್ರವಾಗಿರುತ್ತದೆ.
3) ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳತಕ್ಕದಲ್ಲ.
4) ಕಟ್ಟಡ ನಿರ್ಮಾಣಕ್ಕೆ ಜಾರಿಯಲ್ಲಿರುವ ವಲಯ ನಿಯಮಾವಳಿಗಳು ಮತ್ತು ಕಟ್ಟಡದ, ವಿಧಿಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.
5) ಈ ಪ್ರಾರಂಭಿಕ ಪ್ರಮಾಣ ಪತ್ರವು ಮಂಜೂರಾದ **ದಿನಾಂಕದಿಂದ ಎರಡು ವರ್ಷದವರೆಗೆ ಮಾತ್ರ ಮಾನ್ಯತೆ ಹೊಂದಿರುತ್ತದೆ.** ಈ ಅವಧಿ ಮುಗಿದ ನಂತರ ಹೊಸದಾಗಿ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯದೆ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಹಾಗೂ ಮುಂದುವರೆಸಬಾರದು.
6) ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಮತ್ತು ಏನಾದರೂ ಬದಲಾವಣೆಗಳು ಅವಶ್ಯವಿದ್ದಲ್ಲಿ ಮಾರ್ಪಾಡಿತ ನಕ್ಷೆಗೆ ಮಂಜೂರಾತಿ ಪಡೆದು ಮುಂದುವರೆಸತಕ್ಕದ್ದು.
7) ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.
8) ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ರಸ್ತೆಯಲ್ಲಿ/ಚರಂಡಿ ಮೇಲೆ ಅಥವಾ ಯಾವುದೇ ಸಾರ್ವಜನಿಕ ಪ್ರದೇಶದಲ್ಲಿ ಶೇಖರಣೆ ಮಾಡಬಾರದು,ಈ ಬಗ್ಗೆ ಕಂಡು ಬಂದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ರದ್ದುಪಡಿಸಲಾಗುವುದು.
9) ಕಟ್ಟಡ ನಡುಜಾಗ ಪ್ರದೇಶದಲ್ಲಿ ಮರಗಳನ್ನು ಬೆಳೆಸತಕ್ಕದ್ದು.
10) ನಿವೇಶನದ ಆವರಣದೊಳಗೆ ಮಳೆ ನೀರಿನ ಕೊಯ್ಲಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
11) ಸೋಲಾರ್ ವಾಟರ್ ಹಿಟರ್‌ನ್ನು ಕಟ್ಟಡದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
12) ಈ ನಿವೇಶನದ ಬಗ್ಗೆ ಏನಾದರೂ ಸಿವಿಲ್ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ನೀವು ಬದ್ಧರಾಗಿರತಕ್ಕದ್ದು.

ಪು.ತಿ.ನೋ

13) ಪ್ರಸ್ತಾವಿತ ನಿವೇಶನವು ಯಾವುದೇ ಭೂ ಸ್ವಾಧೀನಕ್ಕೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಬ್ದಾರಿಯಾಗಿರುವುದಿಲ್ಲ.

14)ಕಟ್ಟಡ ನಿರ್ಮಾಣ ಕಾರ್ಯಪ್ರಾರಂಭಿಸುವ ಮುನ್ನ ಮಾಯಸಂದ್ರ ಗ್ರಾಮಪಂಚಾಯಿತಿಯಿಂದಪರವಾನಗೆಯನ್ನು ಪಡೆಯತಕ್ಕದ್ದು.

15) ಯಾವುದೇ ಸಿವಿಲ್ ವ್ಯಾಜ್ಯಗಳಿದ್ದಲ್ಲಿ, ನ್ಯಾಯಾಲಯದ ಆದೇಶಕ್ಕೆ ಬದ್ಧರಾಗಿರುವ, ಸುಳ್ಳು ಮಾಹಿತಿ ಅಥವಾ ಸಲ್ಲಿಸಿರುವ ಯಾವುದೇ ಮಾಹಿತಿ/ದಾಖಲೆಗಳು, ತಪ್ಪಾಗಿದ್ದಲ್ಲಿ/ಪೋರ್ಜರಿ ಆಗಿದ್ದಲ್ಲಿ/ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಕಟ್ಟಡ ನಕ್ಷೆ ಅನುಮೋದನೆಯು ಸ್ವಯಂಚಾಲಿತವಾಗಿ ರದ್ದಾಗುವ ನಿಬಂಧನೆಗೊಳ್ಳಪಟ್ಟಿರುತ್ತದೆ.

16)ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪತ್ರ ಸಂಖ್ಯೆ:PCB/433/CNP/08/H-1133 ದಿನಾಂಕ: 12.11.08ರ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.ಹಾಗೂ ವಿಧಿಸಿರುವ ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು.

17) ಡೈರೆಕ್ಟರ್ ಜನರಲ್ ಫೈರ್‌ಪೋರ್ಸ್ ಇವರ ಪತ್ರ ಸಂಖ್ಯೆ:GBC(1)285/2010 ದಿನಾಂಕ: 25.05.2011ರಲ್ಲಿನ ನಿಬಂಧನೆಗಳನ್ನು ತಪ್ಪದೇ ಪಾಲಿಸತಕ್ಕದ್ದು.

18) ಪ್ರಾಧಿಕಾರದ ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ:ಆಯೋಪ್ರಾ/ಸಿಸಿ/22/08-09 ದಿನಾಂಕ: 2.03.2010ರಂದು ನೀಡಲಾದ ಪರಿಷ್ಕೃತ ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ನಕ್ಷೆಯನ್ನು ರದ್ದುಪಡಿಸಲಾಗಿದೆ.

19) ಅನುಮೋದಿತ ನಕ್ಷೆಯ ವಿವರಗಳು ಈ ಕೆಳಕಂಡಂತಿದೆ;

| ನಡುಜಾಗ | ವಲಯ ನಿಯಮಾವಳಿಯಂತೆ | ನಕ್ಷೆಯಂತೆ |
|---|---|---|
| ಮುಂಭಾಗ | 9.00ಮೀ. | 9.00ಮೀ. |
| ಹಿಂಭಾಗ | 9.00ಮೀ | 9.00ಮೀ. |
| ಎಡಭಾಗ | 9.00ಮೀ | 9.00ಮೀ. |
| ಬಲಭಾಗ | 9.00ಮೀ | 9.00ಮೀ. |
| FAR | 2.25 | 1.45 |
| No of Floors | --- | ಬೇಸ್‌ಮೆಂಟ್+ನೆಲ+8 ಮೇಲ್ ಮಹಡಿ |
| Parking | 564 No's | 571 No's |

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್15(4)ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

05/08

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ
ನಿರ್ದೇಶಕರು ಹಾಗೂ ಸದಸ್ಯ- ಕಾರ್ಯದರ್ಶಿ,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಇವರಿಗೆ,
M/s Janaadhar (India) Private Limited,
Rajashree Saroja Plaza, 34/1, Andree Road,
Shanthinagar,Bangalore-560 027.